ಮಂಗಳೂರು ವಿಶ್ವವಿದ್ಯಾನಿಲಯ

ಇತಿಹಾಸ ಅಧ್ಯಯನ ವಿಭಾಗ

ದಿನಾಂಕ 29.09.2021 ರಂದು ಅಪರಾಹ್ನ 10.30ಕ್ಕೆ ನಡೆದ ಇತಿಹಾಸ ಅಧ್ಯಯನ ಮಂಡಳಿ ಸಭೆಯ ನಡವಳಿಗಳು.

ಹಾಜರಿದ್ದ ಸದಸ್ಯರು:

1. ಪ್ರೊ. ಬಿ. ಉದಯ - ಅಧ್ಯಕ್ಷರು
2. ಪ್ರೊ. ಕೆ.ಯಂ. ಲೋಕೇಶ್ - ಸದಸ್ಯರು
3. ಡಾ. ತ್ರಿವೇಣಿ - ಸದಸ್ಯರು

ಗೈರುಹಾಜರಾದ ಸದಸ್ಯರು:

1. ಪ್ರೊ. ನಿರ್ಮಲ್ ರಾಜು - ಸದಸ್ಯರು
2. ಪ್ರೊ. ವಿಜಯಲಕ್ಷ್ಮಿ ಕೆ.ಎಸ್ - ಸದಸ್ಯರು
3. ಡಾ. ವಿ.ವಿ. ಹರಿದಾಸ್ - ಸದಸ್ಯರು

ಅಧ್ಯಯನ ಮಂಡಳಿಯು ಕಾರ್ಯಸೂಚಿಗಳ ಕುರಿತು ಸುದೀರ್ಘ ಚರ್ಚೆಯ ನಂತರ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು.

ಕಾರ್ಯಸೂಚಿ – 01: Recognition of Mr. Mahadevaiah as a Research Guide in History

ಡಾ. ಮಹದೇವಯ್ಯನವರು ಸಹ-ಬರಹಗಾರರಾಗಿ ಪ್ರಕಟಿಸಿರುವ ಪುಸ್ತಕಗಳನ್ನು ಹಾಗೂ ಸಂಶೋಧನಾ ಲೇಖನಗಳೆಲ್ಲವನ್ನು ಪರಿಶೀಲಿಸಿದ ಮಂಡಳಿಯು ಅರ್ಜಿದಾರರು ಸ್ಥಳೀಯ,ರಾಜ್ಯ,ರಾಷ್ಟ್ರೀಯ,ಅಂತರಾಷ್ಟ್ರೀಯ ಸ್ವರೂಪದ ಇತಿಹಾಸದಲ್ಲಾಗಲಿ, ಹಾಗೆಯೇ ಪುರಾತನ, ಮಧ್ಯಕಾಲೀನ ಮತ್ತು ಆಧುನಿಕ ಯುಗಗಳಿಗೆ ಸಂಬಂಧಿಸಿದ ಇತಿಹಾಸದ ಯಾವುದೇ ಕ್ಷೇತ್ರದಲ್ಲಿ ನಿರ್ದಿಷ್ಟವಾಗಿ ಸಂಶೋಧನಾ ಪರಿಣತಿಯನ್ನು ಹೊಂದಿರುವುದು ಕಂಡುಬರುವುದಿಲ್ಲವೆಂದು ಅಭಿಪ್ರಾಯ ಪಟ್ಟಿತು. ಸಂಶೋಧನಾ ಮಾರ್ಗದರ್ಶಕರಾಗಲು ಇತಿಹಾಸದ ಒಂದು ನಿರ್ದಿಷ್ಟ ಕ್ಷೇತ್ರ, ಕಾಲ, ಆಕರಗಳು, ಇತಿಹಾಸ ಕಥನ ಮತ್ತು ಆ ಕ್ಷೇತ್ರದ ಕುರಿತ ಸಂಶೋಧನೆಯ ವಿಕಾಸದಲ್ಲಿ ಆಗುತ್ತಿರುವ ಬೆಳವಣಿಗೆಗಳ ಕುರಿತು ಆಳವಾದ ಜ್ಞಾನ ಮತ್ತು ಅಗತ್ಯ ಒಳನೋಟಗಳ ಅವಶ್ಯಕತೆಯಿದ್ದು ಅರ್ಜಿದಾರರ ಹೆಚ್ಚಿನ ಪ್ರಕಟನೆಗಳು ಸಮಕಾಲೀನ ಪರಿಸ್ಥಿತಿಯ ಬೇರೆ ಬೇರೆ ಅಂಶಗಳಿಗೆ ಸಂಬಂಧಿಸಿದ್ದು, ಇತಿಹಾಸಕ್ಕೆ ನೇರವಾದ ಸಂಗತವನ್ನು ಹೊಂದಿರುವುದಿಲ್ಲ. ಹೀಗಾಗಿ, ಸಂಶೋಧನಾ ಕ್ಷೇತ್ರದಲ್ಲಿ ಇವರ ಪರಿಣತಿಯು ಮಿತವಾಗಿರುವುದು ಕಂಡು ಬರುತ್ತಿರುವ ಹಿನ್ನೆಲೆಯಲ್ಲಿ ಡಾ. ಮಹದೇವಯ್ಯನವರನ್ನು ಇತಿಹಾಸದಲ್ಲಿ ಸಂಶೋಧನಾ ಮಾರ್ಗದರ್ಶಕರಾಗಿ ಮಾನ್ಯಮಾಡಲು ಸಾಧ್ಯವಾಗುವುದಿಲ್ಲ ಎಂದು ನಿರ್ಣಯಿಸಿತು.

ಕಾರ್ಯಸೂಚಿ – 02: ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆ ಮತ್ತು ಫಲಿತಾಂಶಗಳ ಪರಿಶೀಲನೆ.

ಹಿಂದಿನ ವರ್ಷದ ಪ್ರಶ್ನೆಪತ್ರಿಗೆಗಳನ್ನು ಹಾಗೂ ಫಲಿತಾಂಶಗಳನ್ನು ಪರಿಶೀಲನೆ ನಡೆಸಿದ ಮಂಡಳಿಯು ಅವುಗಳು ತೃಪ್ತಿಕರವಾಗಿವೆಯೆಂದು ಅಭಿಪ್ರಾಯಪಟ್ಟಿತ್ತು.

ಕಾರ್ಯಸೂಚಿ – 03: ಪರೀಕ್ಷಕರ ಪಟ್ಟಿಯ ತಯಾರಿ

ಅಧ್ಯಯನ ಮಂಡಳಿಯು ಪರೀಕ್ಷಕರ ಪಟ್ಟಿಯಲ್ಲಿ ನಿವೃತ್ತ ಉಪನ್ಯಾಸಕರ ಹೆಸರುಗಳನ್ನು ಕೈಬಿಟ್ಟು, ಸೇವೆಯಲ್ಲಿರುವ ಕೆಲವು ಅರ್ಹ ಉಪನ್ಯಾಸಕರನ್ನು ಸೇರಿಸಿ ಅದನ್ನು ಪರಿಷ್ಕರಣೆ ಮಾಡಿತು.

ಕಾರ್ಯಸೂಚಿ – 04: RPE ಯನ್ನು ಪಿಎಚ್.ಡಿ ಕೋರ್ಸ್ ವರ್ಕ್‌ನ ಪಠ್ಯಕ್ರಮದಲ್ಲಿ ಒಳಗೊಳ್ಳುವ ಬಗ್ಗೆ.

ಅಧ್ಯಯನ ಮಂಡಳಿಯು, ವಿಶ್ವವಿದ್ಯಾನಿಲಯವು ದಿನಾಂಕ 20.05.2021ರ ಪತ್ರದಲ್ಲಿ (No:MU/ACC/CR 67/2020-21/A2) ನಿರ್ದೇಶಿಸಿದಂತೆ, ಪಿಎಚ್.ಡಿ ಕೋರ್ಸ್ ವರ್ಕ್‌ನ ಪಠ್ಯಕ್ರಮದಲ್ಲಿ 'Research and Publication Ethics (RPE)' ಪತ್ರಿಕೆಯನ್ನು, ಪತ್ರಿಕೆ – 2 ಆಗಿ ಸೇರಿಸಿಕೊಳ್ಳಲು ಮತ್ತು ಈ ಶೈಕ್ಷಣಿಕ ವರ್ಷದಿಂದ ಅದನ್ನು ಬೋಧಿಸಲು ನಿರ್ಣಯಿಸಿತು.

ಅಧ್ಯಕ್ಷರು ಎಲ್ಲಾ ಸದಸ್ಯರಿಗೆ ವಂದಿಸುವುದರೊಂದಿಗೆ ಅಧ್ಯಯನ ಮಂಡಳಿ ಸಭೆಯು ಮುಕ್ತಾಯಗೊಂಡಿತು.

ಪ್ರೊ. ಬಿ. ಉದಯ
Chairman
Board of Studies in History (PG)
Mangalore University
Mangalagangotri - 574 199

ಪ್ರೊ. ಕೆ.ಯಂ. ಲೋಕೇಶ್

ಡಾ. ತ್ರಿವೇಣಿ